**2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ವ.ನ್ಯಾ.ದಂ., ನ್ಯಾಯಾಲಯ, ಕಡೂರು.**

**ಸಿ. ಸಿ. ಸಂಖ್ಯೆ: 3475/2022**

ಫಿರ್ಯಾದುದಾರರು :- **ಶ್ರೀ ವಿಶ್ವರಾಧ್ಯ.ಎಸ್**

ವಿರುದ್ಧ

ಆರೋಪಿ:- **ಶ್ರೀ ಸಂಜಯ್ ಗೌಡ.ಎಸ್.ಟಿ**

**ಆ ಪಾ ದ ನೆ**

ಆರೋಪಿಯಾದ ನೀವು ಪಿರ್ಯಾದುದಾರರವರಿಂದ ರೂ.**4,50,000/-** ಜಿಮ್ ಪರಿಕರಗಳನ್ನು ಕೊಂಡುಕೊಳ್ಳಲು ಹಾಗೂ ಜಿಮ್ ನಡೆಸುವ ಉದ್ದೇಶದಿಂದ ಸಾಲ ಮಾಡಿದ್ದು, ಸದರಿ ಭಾದ್ಯತೆಯ ಮರುಪಾವತಿಗಾಗಿ ಪಿರ್ಯಾದುದಾರರ ಹೆಸರಿಗೆ ರೂ.**4,50,000/-** ಮೌಲ್ಯದ ಆಕ್ಸಿಸ್ ಬ್ಯಾಂಕ್, ಆರ್.ಬಿ.ಐ ಲೇಔಟ್, ಬೆಂಗಳೂರು ಶಾಖೆ, ಚೆಕ್ ನಂ: **269443** ಸಂಖ್ಯೆಯ ಚೆಕ್ಕನಲ್ಲಿ ದಿನಾಂಕ : **30.09.2022** ಎಂದು ನಮೂದು ಮಾಡಿದ್ದು, ಸದರಿ ಚೆಕ್ಕನ್ನು ಪಿರ್ಯಾದುದಾರರು ತನ್ನ ಖಾತೆಯನ್ನು ಹೊಂದಿರುವ ಕರ್ನಾಟಕ ಬ್ಯಾಂಕ್, ಸಖರಾಯಪಟ್ಟಣ ಶಾಖೆ, ಇಲ್ಲಿ ನಗದೀಕರಿಸಲು ಹಾಜರುಪಡಿಸಿದಾಗ, ಬ್ಯಾಂಕಿನವರು ನಿಮ್ಮ ಖಾತೆಯಲ್ಲಿ **"Account blocked situation covered in 2125"** ಎಂಬ ಹಿಂಬರಹದೊಂದಿಗೆ ಚೆಕ್ಕು ಅಮಾನ್ಯಗೊಂಡಿದ್ದು ಆ ಬಗ್ಗೆ ಸದರಿ ಬ್ಯಾಂಕಿನವರು ಹಿಂಬರಹ ನೀಡಿದ್ದು, ನಂತರ ಫಿರ್ಯಾದುದಾರರು ತಮ್ಮ ವಕೀಲರ ಮುಖಾಂತರ ದಿನಾಂಕ: **22.10.2022** ರಂದು ತಿಳುವಳಿಕೆ ಪತ್ರವನ್ನು ಕಳುಹಿಸಿದ್ದರೂ ಸಹ ಹಣ ಮರುಪಾವತಿ ಮಾಡಿರುವುದಿಲ್ಲ, ಆ ಕಾರಣ ನೀವು ವರ್ಗಾವಣೆಯ ಲಿಖಿತ ಅಧಿನಿಯಮ ಕಲಂ **138** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿದ್ದೀರೆಂದು ಆಪಾದಿಸಲಾಗಿದೆ.

ಪ್ರಶ್ನೆ: **1** ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ**?**

ಉತ್ತರ:

ಪ್ರಶ್ನೆಃ **2** ಮೇಲ್ಕಂಡ ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ**?**

ಉತ್ತರಃ

(ದಿನಾಂಕಃ **24.01.2024** ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗಳಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸಿದೆ.)

ಸಹಿ/-
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.ಗಳು., ಕಡೂರು.